■ ಹನಿ

# ಸೆಲೆಬ್ರಿಟಿ

## ಸುಂದರಾಂಗ ಜಾಣ



'ಏಷ್ಯಾದ ಅತ್ಯಂತ ಸೆಕ್ಸೀ ಗಂಡಸು' ಎಂಬ ಬಿರುದು ಈ ಸಲ ಹೃತಿಕ್ ರೋಶನ್ ಮುಡಿಗೇರಿದೆ. 'ಈಸ್ಟರ್ನ್ ಐ ವೀಕ್ಲಿ'ಯ ಈ ಪ್ರಶಸ್ತಿಯಿಂದ ಬಾಲಿವುಡ್‌ನಲ್ಲಿ ಹೃತಿಕ್ ಇಮೇಜ್ ಇನ್ನಷ್ಟು ವರ್ಧಿಸಿದೆ. ಇಂತಹ ಪ್ರಶಸ್ತಿಗಳಿಗೆ ನಾಗರಿಕ ಜಗತ್ತಿನಲ್ಲಿ ಯಾವುದೇ ಅರ್ಥವಿಲ್ಲವಾದರೂ, ಸಿನಿಮಾ ಜಗತ್ತಿನಲ್ಲಿ ಇದೊಂದು ಪ್ರತಿಷ್ಠೆಯ ಪ್ರಶಸ್ತಿ. ಅದರಲ್ಲೂ ಹೃತಿಕ್ ಅಂತಿಮ 50 ಮಂದಿಯ ಪಟ್ಟಿಯಲ್ಲಿ ಘಟಾನುಘಟಿ ಸ್ಟಾರ್‌ಗಳನ್ನು ಸೋಲಿಸಿರುವುದು ಕುತೂಹಲಕರ. ಕಳೆದ ವರ್ಷ ಈ ಪ್ರಶಸ್ತಿ ಗೆದ್ದಿದ್ದ ರಣಬೀರ್ ಕಪೂರ್ ಈ ಸಲ 6ನೆ ಸ್ಥಾನಕ್ಕೆ ಇಳಿದರೆ, ಶಾರೂಕ್ ಮತ್ತು ಸಲ್ಮಾನ್ ಖಾನ್ 3 ಮತ್ತು 4ನೇ ಸ್ಥಾನ ಪಡೆದಿರುವುದು ಹೃತಿಕ್‌ಗೆ ಹೆಮ್ಮೆ ತರುವ ಸಂಗತಿಯೇ. 37ರ ಹರೆಯದಲ್ಲಿ (ಬರ್ತ್‌ಡೇ 10-1-74) ಇನ್ನೂ ಅಂಗಸೌಷ್ಠವ ಉಳಿಸಿಕೊಂಡು ಯುವಕರನ್ನೂ ನಾಚಿಸುವಂತೆ ಇರುವ ಹೃತಿಕ್ ಈ ಪಟ್ಟದಿಂದ ಬಾಲಿವುಡ್ ತಾರಾಪಟ್ಟಿಯಲ್ಲಿ ಇನ್ನಷ್ಟು ಮೇಲೇರಬಹುದು.

1980ರಲ್ಲಿ 'ಆಶಾ' ಎಂಬ ಚಿತ್ರದಲ್ಲಿ ಬಾಲನಟನಾಗಿ ಡ್ಯಾನ್ಸ್ ಮಾಡಿದ ಹೃತಿಕ್‌ಗೆ ಆಗಲೇ ನಾಲಗೆ ತಡವರಿಸುವ ಉಗ್ಗುವಿಕೆಯ ಸಮಸ್ಯೆ ಇತ್ತು. ಓರಲ್ ಟೆಸ್ಟ್ ಇದ್ದಾಗ ಶಾಲೆ ತಪ್ಪಿಸಿಕೊಂಡು ಕೀಳರಿಮೆಯಿಂದ ಬಳಲುತ್ತಿದ್ದ ಈ ಹುಡುಗ, ಬಳಿಕ ಪ್ರತಿದಿನ ಸ್ಪೀಚ್ ಥೆರಪಿ ನಡೆಸಿ ಆ ಸಮಸ್ಯೆಯನ್ನು ಬಗೆಹರಿಸಿಕೊಂಡ. ಚಿಕ್ಕಪ್ಪ ರಾಜೇಶ್ ರೋಶನ್ ಖ್ಯಾತ ಸಂಗೀತ ನಿರ್ದೇಶಕ- ಅಪ್ಪ ರಾಕೇಶ್ ರೋಶನ್ ದೊಡ್ಡ ನಿರ್ದೇಶಕ. ಹಾಗಾಗಿ ಈತನೂ ಚಿತ್ರನಟನಾಗುವುದು ಸುಲಭವಾಯಿತು. ಮುಂಬೈಯ ಸಿಡೆನ್‌ಹೆಮ್ ಕಾಲೇಜಲ್ಲಿ ಬಿಕಾಂ ಪದವಿ ಪಡೆದ ಬಳಿಕ ಸಿನಿಮಾ ಕಡೆಗೆ ಒಲವು ಮೂಡಿತು. ಆದರೆ ಆರಂಭದಲ್ಲಿ ತಂದೆಯ ಜತೆಗೆ ಸಹನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದಾಗ ಈತನಿಗೆ ನಟಿಸುವ ಗೀಳು ಇರಲಿಲ್ಲ. 95ರಲ್ಲಿ ಅಪ್ಪ ನಿರ್ದೇಶಿಸಿದ 'ಕರಣ್-ಅರ್ಜುನ್' ಮತ್ತು 97ರಲ್ಲಿ 'ಕೋಯ್ಲಾ'- ಎರಡಕ್ಕೂ ಈತನದ್ದೇ ಸಹನಿರ್ದೇಶನ. ಆ ಚಿತ್ರಗಳಲ್ಲಿ ಹೀರೊ ಆಗಿದ್ದವರು ಶಾರೂಕ್ ಮತ್ತು ಸಲ್ಮಾನ್. ಈಗ ನೋಡಿದರೆ ಈ ಇಬ್ಬರನ್ನೂ ಸೋಲಿಸಿ ಹೃತಿಕ್ 'ಸುಂದರಾಂಗ' ಎನಿಸಿಕೊಂಡಿದ್ದಾನೆ. ನಿರ್ಮಾಪಕ ಸಂಜಯ್‌ಖಾನ್ ಮಗಳನ್ನು ಮದುವೆ ಆದದ್ದೂ ಈತನ ತಾರಾವರ್ಚಸ್ಸು ಹೆಚ್ಚಿಸಿತು.

ಹ್ರಹಾನ್ ಮತ್ತು ಹ್ರದಾನ್ ಎಂಬ ಇಬ್ಬರು ಮಕ್ಕಳ ತಂದೆಯಾಗಿರುವ ಹೃತಿಕ್ ಈಗಲೂ ಹದಿಹರೆಯದ ಯುವಕನ ಪಾತ್ರದಲ್ಲೇ ಮಿಂಚುತ್ತಿರಲು ಕಾರಣ ಆತನ ಅಂಗಸಾಧನೆ. ಸದ್ಯಕ್ಕೆ 'ಅಗ್ನಿಪಥ್' ರಿಮೇಕ್‌ನಲ್ಲಿ ಹಾಗೂ 'ಕ್ರಿಶ್-2' ಸಿನಿಮಾದಲ್ಲಿ ಹೀರೊ ಆಗಿರುವ ಹೃತಿಕ್‌ಗೆ ಬಲಗೈಯಲ್ಲಿ ಎರಡು ಹೆಬ್ಬೆರಳುಗಳಿವೆ! ಬಹುತೇಕ ಸಿನಿಮಾಗಳಲ್ಲಿ ಈ ಹೆಬ್ಬೆರಳು ಕಾಣಿಸುವುದಿಲ್ಲ. ಆದರೆ 'ಕೋಯಿ ಮಿಲ್ ಗಯಾ' ಚಿತ್ರದಲ್ಲಿ ಚಿತ್ರದ ಕಥೆಗೆ ಅಗತ್ಯ ಇರುವುದರಿಂದಲೇ ಈ ಎರಡು ಹೆಬ್ಬೆರಳುಗಳನ್ನು ತೋರಿಸಲಾಗಿತ್ತು. 'ಸುಂದರಾಂಗ'ನಾಗಿ ಆಯ್ಕೆಯಾಗಿರುವ ಹೃತಿಕ್ ಸದ್ಯಕ್ಕೆ ಎರಡೂ ಹೆಬ್ಬೆರಳುಗಳನ್ನು ಎತ್ತಿ ವಿಜಯದ ಸಂಕೇತ ತೋರಿಸಬಹುದು!

## ಮರ್ಚೆಂಟ್ ವಿದಾಯ

ಯಾಸೀನ್ ಮರ್ಚೆಂಟ್ ವೃತ್ತಿಪರ ಸ್ನೂಕರ್ ಆಟಕ್ಕೆ ವಿದಾಯ ಹೇಳಿದ್ದಾರೆ. ಕಳೆದ ವಾರ ಬೆಂಗಳೂರಿನಲ್ಲಿ ಐಬಿಎಸ್‌ಎಫ್ ವಿಶ್ವ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ಆಸ್ಟ್ರೇಲಿಯಾದ ಸ್ಟೀವ್ ಮಿಸ್ಫರ್ಡ್ ವಿರುದ್ಧ ಸೋಲು ಅನುಭವಿಸಿದ ನಂತರ ಅವರ ಈ ನಿರ್ಧಾರ ಹೊರಬಿದ್ದಿದೆ. 30 ವರ್ಷಗಳಿಂದ ಸ್ನೂಕರ್ ಆಟಗಾರನಾಗಿದ್ದ ಯಾಸೀನ್ ನಿವೃತ್ತಿಯ ನಿರ್ಧಾರ ಪ್ರಕಟಿಸುವಾಗ ಕಣ್ಣಂಚು ಒದ್ದೆಯಾಗಿತ್ತು, ಹೃದಯ ಭಾರವಾಗಿತ್ತು. ಸಹಜವಾಗಿಯೇ 'ನಾನೀಗ ಖಾಲಿಯಾಗಿದ್ದೇನೆ' ಎಂದರು.

ಮುಂಬೈವಾಸಿ ಯಾಸೀನ್ ಮರ್ಚೆಂಟ್ ಆರಂಭದಲ್ಲಿ ಹವ್ಯಾಸಿ ಆಟಗಾರನಾಗಿಯೇ ಇದ್ದವರು. 85-86ರಲ್ಲಿ ಬೆಂಗಳೂರಿನಲ್ಲಿ ನಡೆದ ಟೂರ್ನಿಯಲ್ಲಿ ಆಗಿನ ಖ್ಯಾತ ಆಟಗಾರ ಬಿ.ವಿ.ಶ್ರೀನಿವಾಸಮೂರ್ತಿ ಅವರನ್ನು ಸೋಲಿಸಿದ್ದೇ ಯಾಸೀನ್‌ಗೆ ದೊಡ್ಡ ಖ್ಯಾತಿ ದೊರಕಿತು. 92ರಲ್ಲಿ ಅವರು ವೃತ್ತಿಪರ ಸ್ನೂಕರ್ ಆಟಗಾರರಾದರು. ಅದಕ್ಕೂ ಮುನ್ನ 91ರಲ್ಲಿ ವಿಶ್ವದ ಖ್ಯಾತ ಆಟಗಾರ ಡ್ಯಾನಿ ಫೌಲರ್ ಅವರನ್ನು ಸೋಲಿಸಿದ್ದೂ ಯಾಸೀನ್‌ರ ವೃತ್ತಿಪರರಾಗುವ ನಿರ್ಧಾರಕ್ಕೆ ಬಲ ಒದಗಿಸಿತು. ವಿಶ್ವ ವೃತ್ತಿಪರ ಸ್ನೂಕರ್‌ನಲ್ಲಿ 65ನೇ ರ್‍ಯಾಂಕ್ ಗಳಿಸಿ, ಆ ಎತ್ತರಕ್ಕೆ ಏರಿದ ಮೊದಲ ಭಾರತೀಯ ಎಂಬ ಹೆಮ್ಮೆಯನ್ನೂ ಯಾಸೀನ್ ಉಳಿಸಿ ಹೋಗಿದ್ದಾರೆ.

1991, 2000 ಮತ್ತು 2001ರಲ್ಲಿ ಮೂರು ಸಲ ರಾಷ್ಟ್ರೀಯ ಸ್ನೂಕರ್ ಚಾಂಪಿಯನ್ ಆದವರು ಯಾಸೀನ್. (ಬರ್ತ್‌ಡೇ 17-12-66) 2002 ಏಷ್ಯನ್ ಗೇಮ್ಸ್‌ನಲ್ಲಿ ಡಬಲ್ಸ್‌ನಲ್ಲಿ ಭಾರತಕ್ಕೆ ಚಿನ್ನ ತಂದುಕೊಟ್ಟ ಯಾಸೀನ್, 2006ರಲ್ಲಿ ಡಬಲ್ಸ್ ಕಂಚು ಹಾಗೂ 2010ರಲ್ಲಿ ಡಬಲ್ಸ್ ಬೆಳ್ಳಿ ಗೆದ್ದದ್ದೂ ಸಾಧನೆಯೇ. 2007ರಲ್ಲಿ ಎಸಿಬಿಎಸ್ ಏಷ್ಯನ್ ಸ್ನೂಕರ್ ಚಾಂಪಿಯನ್ ಆದದ್ದು ವೃತ್ತಿಜೀವನದ ಉತ್ತುಂಗ ಘಟನೆ.

ಭಾರತದಲ್ಲಿ ಕ್ರಿಕೆಟ್ ಹೊರತುಪಡಿಸಿ ಉಳಿದ ಕ್ರೀಡೆಗಳಲ್ಲಿ ವೃತ್ತಿಪರರಾದರೆ ಹೊಟ್ಟೆ ತುಂಬಿಸಿಕೊಳ್ಳುವುದು ಕಷ್ಟ. ಸಂಸಾರದ ಕಡೆಗೆ, ಇಬ್ಬರು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಲು ಯಾಸೀನ್ ವ್ಯಾಪಾರವನ್ನೇ ನೆಚ್ಚಿಕೊಂಡಿದ್ದರು. ಹಾಗಾಗಿ ಸ್ನೂಕರ್ ವೃತ್ತಿಯ ಕಡೆಗೆ ಹೆಚ್ಚು ಸಮಯ ನೀಡಲು ಆಗಲಿಲ್ಲ. 'ಮನಸ್ಸು ಮಾಡಿದ್ದರೆ ನಾನು ವಿಶ್ವದಲ್ಲಿ 16ನೇ ರ್‍ಯಾಂಕ್‌ವರೆಗೂ ಏರಬಹುದಿತ್ತೇನೋ' ಎನ್ನುವುದು ಅವರದ್ದೇ ಪಶ್ಚಾತ್ತಾಪದ ಮಾತು. 'ಪದ್ಮಶ್ರೀ' ಪ್ರಶಸ್ತಿ ಕೈತಪ್ಪಿದ್ದೂ ಅವರ ದುಃಖದ ನೆನಪುಗಳಲ್ಲಿ ಒಂದು. ಅದೇನೇ ಇದ್ದರೂ, ನಿವೃತ್ತಿಯ ಬಳಿಕ ಈಗ ಬಿಎಸ್‌ಎಫ್‌ಐ ಅವರಿಗೆ ರಾಷ್ಟ್ರೀಯ ಕೋಚ್ ಸ್ಥಾನದ ಆಫರ್ ಮಾಡಿರುವುದು ಸಂತಸದ ವಿಷಯ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65